ಭದ್ರಾಚಾರರ ಪಾದಕ್ಕೆ ಒಂದಾದ ಮೇಲೊಂದರಂತೆ ಹಾಸಿಹಾಸಿ ಅಡ್ಡುಬಿದ್ದವು. ತಮ್ಮತ್ರ ಇರುವ ಹಳೇ ಗುದ್ಲಿ, ಪಿಕಾಸಿ, ಆರೆ, ಬಾಂಡ್ಲಿ ತಕ್ಕಂಡು ಅಲ್ಲೊಂದು ಇಲ್ಲೊಂದು ಹತಾರಾಗಳನ್ನು ಈಸ್ಕಂಡು ಭದ್ರಾಚರ್ರು ಕೈಲೆ ಗುದ್ಲಿ ಪೂಜೆ ಮಾಡ್ಸಿ ದೇವುಸ್ಥಾನದ ಅದಿ ಮಾಡಾಕೆ ಪ್ರಾರಂಭುವ ಮಾಡಿರು.

ಅದೇ ಟೈಮಿಗೆ ಎಂಎಲ್‌ಎ ಎಲೆಕ್ಷನ್ ಘೋಷಣೆಯಾಯ್ತು. ಇಡೀ ಕ್ಷೇತ್ರದ ಅರ್ಧದಷ್ಟು ಓಟಿದ್ದ ಸಂಪಿಗೆ ಪುರವೇ ಪ್ರತಿ ಚುನಾವಣೆಯಲ್ಲಿ ಅಭ್ಯರ್ಥಿಗಳ ಹಣೆ ಬರಹ ಅಳಿಸಿಹಾಕಿ ತನಗೆ ಬೇಕಾದಂಗೆ ಬರೀತಿತ್ತು. ಇಂಥಾ ಗ್ರಾಮದಲ್ಲಿ - ಇಂಥಾ ಟೇಮಲ್ಲಿ ಏನಾದರೂ ಕೆಲಸ ಆರಂಭವಾದರೆ ಸಾಕು ಎಂದೇ ಕಾಯುತ್ತಿದ್ದ ಕ್ಯಾಂಡಿಡೇಟುಗಳ ಕಣ್ಣಿಗೆ ಮಾದಿಗರ ದೇವಾಲಯದ ಕೆಲಸ ಬಿತ್ತು. ಆ-ಪಕ್ಷ, ಈ-ಪಕ್ಷ ಅನ್ನದಂಗೆ ಇರೋ ಬರೋ ಕ್ಯಾಂಡಿಡೇಟುಗಳೆಲ್ಲಾ ಮುನ್ನೂರೈವತ್ತು ಮಾದಿರ ಓಟನ್ನ ಯಾಕೆ ಕಳಕಂಬೇಕು ಅಂತೇಳಿ ಒಬ್ರು ಇಟಗಿ, ಒಬ್ರು ಕಲ್ಲು, ಒಬ್ರು ಸಿಮೆಂಟು, ಬಾಗಿಲು-ಕಿಟಕಿ ಇತ್ಯಾದಿಯಾಗಿ ಸೇರಿ-ಸೇರಿ ಆ ಎಂಕಟೇಶ್ವರನೂ ಅಂದುಕೊಳ್ಳಲಾರದಂಥಾ ಮಟ್ಟಿಗೆ ಗುಡಿಯ ಕೆಲಸ ಬೆಳೀತಾ ಇತ್ತು. ಇಂಗೇ ಗುಡಿ ಕೆಲಸ ನಡೀವಾಗ ಪಕ್ಷೇತರ ಎಂಎಲ್‌ಎ ಕ್ಯಾಂಡಿಟೇಟ್ಒಬ್ಬರು ಈ ಮಾದಿಗರ ಎಂಕುಟೇಶ್ವರನ ಗುಡಿ ನಡೀವಾ ಜಾಗಕ್ಕೆ ಬಂದು ಸಭೆ ಸೇರಿಸಿ 'ನನ್ನ ನೀವು ಗೆಲ್ಸಿಸಿರೇ ನಿಮಗೆಲ್ಲಾ ಅಂಗೇ ಮಾಡ್ತೀನಿ, ನಿಮ್ ಕೇರಿನ ಇಂಗೆ ಮಾಡ್ತೀನಿ, ನಿಮ್ಮ ಓಟನ್ನ ಅಲ್ಲಿ ಎತ್ತಿ ಹಿಡಿತೀನಿ, ನಿಮ್ಮ ಪಾದವ ಅಲ್ಲಿಗೆ ತಕ್ಕಂಡೋಗಿ ಇಕ್ತೀನಿ' ಅಂತೇಳಿ ಭಾಷಣ ಬಿಗಿಯುತ್ತಿದ್ದ. ಸಭೆಯ ಮುಂದುಲ ಸಾಲಲ್ಲಿ ಚಕ್ಕಂಬಕ್ಕಲ ಹಾಕ್ಕಂಡು ಕೂತಿದ್ದ ಸೂಜಿ ಏರ್ಪಿನ್ನು ಮಾರುವ ಸುಂಕನಿಗೆ ಅದ್ಯಾವುದೋ ಆವೇಶ ಬಂದಂಗಾಗಿ ಕಣ್ಣೆಲ್ಲುವ ಅಗಲಕ್ಕೆ ಬಿಟ್ಕಂಡು, ಈರು ಮಂಡಿಯಾಗಿ ಕುಳಿತು ನೊರನೊರ ಹಲ್ಲು ಕಡಿದು 'ಓ... ನನ್ನ ಬಸವನೇ...' ಎಂದು ಕಿರುಚಿದಾಕ್ಷಣ ಸುತ್ತಲ

